ದಿನಾಂಕಃ 03.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ವಾದಿ ಪರ ಶ್ರೀ. ಎಮ್. ಆರ್. ಬಿ ವಕೀಲರಿಂದಃ**

ನಾನು ಪಿ ಯು ಸಿ ವರೆಗೆ ಓದಿರುತ್ತೇನೆ. ನಮ್ಮ ಅಜ್ಜ ಈರಪ್ಪನ ತಂದೆಯ ಹೆಸರು ಕೋಣಪ್ಪ ಎಂದರೆ ನಿಜ. ಸದರೀಯವರ ಹೆಸರನ್ನೇ ಪ್ರಸ್ತುತ ವಾದಿಗೆ ಇಟ್ಟಿರುತ್ತಾರೆಂದರೆ ನಿಜ. ಸದರಿ ಕೋಣಪ್ಪನಿಗೆ ನಮ್ಮ ಅಜ್ಜ ಈರಪ್ಪ ಒಬ್ಬನೇ ಮಗ ಎಂದರೆ ನಿಜ.

ನಮ್ಮ ಅಜ್ಜ ಈರಪ್ಪ ಹಾಗೂ ಅಜ್ಜಿ ಗಂಗವ್ವ ಇವರಿಗೆ ಒಟ್ಟು 10 ಜನ ಮಕ್ಕಳು ಎಂದರೆ ನಿಜ. ಅವರೆಂದರೆ 2, 3, 6, 7 , ವಾದಿ 10, 11, 18 ಮತ್ತು 19, ಮೃತ  ಬಸವರಾಜ ಇರುತ್ತಾರೆ. ನಾನು ಮತ್ತು 4 ನೇ ಪ್ರತಿವಾದಿ ಮೈತ 3 ನೇ ಪ್ರತಿವಾದಿಯ ಮಕ್ಕಳು ಇರುತ್ತೇವೆ ಎಂದರೆ ನಿಜ. 8 ಮತ್ತು 9 ನೇಪ್ರತಿವಾದಿಯರು 7 ನೇ ಪ್ರತಿವಾದಿಯ ಮಕ್ಕಳು ಇರುತ್ತಾರೆಂದರೆ ನಿಜ. ಪ್ರತಿವಾದಿ ನಂಬರ 12 ರಿದ 14 ರವರು 11 ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು ಇರುತ್ತಾರೆಂದರೆ ನಿಜ. 15 ರಿಂದ 17 ನೇ ಪ್ರತಿವಾದಿಯರು ಮೃತ ಬಸವರಾಜನ ಹೆಂಡತಿ ಮತ್ತು ಮಕ್ಕಳು ಇರುತ್ತಾರೆಂದರೆ ನಿಜ. ಈ ಮೇಲೆ ಹೇಳಿದವರನ್ನು ಹೊತುಪಡಿಸಿ ನಮ್ಮ ಕುಟುಂಬದಲ್ಲಿ ಬೇರೆ ವ್ಯಕ್ತಿಗಳು ಇರುವುದಿಲ್ಲ.

ನಿಡಿ.179 ನೇದ್ದನ್ನು ದಿ.27.06.2026 ರಂದು ಮಾಡಿರುತ್ತಾರೆಂದರೆ ನಿಜ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಅಂದರೆ ಪ್ರತಿವಾದಿ ನಂಬರ 3(ಎ) ರವರು ಮಾತನಾಡುವುದನ್ನು ಕಡಿಮೆ ಮಾಡುತ್ತಾರೆ. ಆ ಬಗ್ಗೆ ಆಸ್ಪತ್ರೆಗೆ ತೋರಿಸಿರುತ್ತೇವೆ. ನನ್ನ ತಾಯಿಗೆ ಬಿ . ಪಿ ಮತ್ತು ಸಕ್ಕರೆ ಖಾಯಿಲೆ ಕೂಡ ಇರುತ್ತದೆ. ನಿಡಿ.179 ರಲ್ಲಿ ನನ್ನ ತಾಯಿ ಸುಮಿತ್ರಾ ಇವರಿಗೆ  ಬಿ . ಪಿ ಮತ್ತು ಸಕ್ಕರೆ ಖಾಯಿಲೆ ಇರುವ ಬಗ್ಗೆ ಬರೆಸಿರುವುದಿಲ್ಲ ಎಂದರೆ ನಿಜ. ಅದೇ ರೀತಿ ಅವರಿಗೆ

ವಯಸ್ಸಾಗಿದ್ದರಿಂದ ಅವರು ಕಡಿಮೆ ಮಾತನಾಡುತ್ತಾರೆಂದು ಹೇಳಿ ಬರೆಸಿರುವುದಿಲ್ಲ. ಸದರೀಯವರಿಂದ ವಿಶೇಷ ಮುಕ್ತಿಯಾರ ಪತ್ರವನ್ನು ಪಡೆಯುವ ಪ್ರಸಂಗ ಏಕೆ ಬಂತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರಿಗೆ ವಯಸ್ಸಾಗಿದ್ದು, ನ್ಯಾಯಾಲಯಕ್ಕೆ ಓಡಾಡಲು ಆಗುವುದಿಲ್ಲ ಅವರ ಪರವಾಗಿ ಪ್ರಕರಣವನ್ನು ನಾನೇ ಎಲ್ಲಾ ನೋಡಿಕೊಳ್ಳುತ್ತೇನೆಂದು ಹೇಳಿದ್ದರಿಂದ ವಿಶೇಷ ಮುಕ್ತಿಯಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ನಾನು ಆ ರೀತಿ ಹೇಳಿದ್ದರಿಂದ ನನ್ನ ಮೇಲೆ ವಿಶ್ವಾಸ ಇಟ್ಟು ನಮ್ಮ ತಾಯಿ ವಿಶೇಷ ಮುಕ್ತಿಯಾರ ಪತ್ರವನ್ನು ಬರೆದುಕೊಟಿರುತ್ತಾರೆ. ಅವರಿಗೆ ವಯಸ್ಸಾಗಿದ್ದು, ಮಾನಸಿಕ ಹಾಗೂ ದೈಹಿಕ ಖಾಯಿಲೆ ಇರುವ ಬಗ್ಗೆ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ. ಈ ಪ್ರಕರಣದಲ್ಲಿ ನನ್ನ ತಾಯಿಯ ಪರವಾಗಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರಗಳನ್ನು ಮಾಡಿರುವುದಿಲ್ಲ. ನನ್ನ ತಾಯಿ ಆರೋಗ್ಯವಾಗಿದ್ದರೂ ಸಹ ಅವರು ಒಂದು ವೇಳೆ ನ್ಯಾಯಾಲಯಕ್ಕೆ ಬಂದರೆ ಸತ್ಯ ಸಂಗತಿ ಹೊರಗೆ ಬರುತ್ತದೆಂದು ತಿಳಿದು ಅವರನ್ನು ನ್ಯಾಯಾಲಯಕ್ಕೆ ಬರದಂತೆ ಅವರಿಂದ ವಿಶೇಷ ಮುಕ್ತಿಯಾರ ಪತ್ರವನ್ನು ಬರೆದುಕೊಂಡಿರುತ್ತೇನೆಂದರೆ ಸರಿಯಲ್ಲ.

ಸನ್ 2012 ರಲ್ಲಿ ವಾದಿಯು ಮೇಲ್ಮನವಿ ಸಿ ಆರ್ ನಂಬರ 114/2012-13 ರಂತೆ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ನ್ಯಾಯಾಲಯದಲ್ಲಿ ಈ ಪ್ರಕರಣದ 4 ಮತ್ತು 5 ನೇ ಪ್ರತಿವಾದಿಯರು ಹಾಗೂ ಪೌರಾಯುಕ್ತ ನಗರಸಭೆ, ಗೋಕಾಕ ಇವರ ವಿರುದ್ಧ ಪ್ರಕರಣ ದಾಖಲಿಸಿದ್ದರು ಎಂದರೆ ನಿಜ. ಸದರಿ ಪ್ರಕರಣದಲ್ಲಿ ನಮ್ಮ ಪರವಾಗಿ ಶ್ರೀ. ಎಲ್. ಎಮ್. ಶೆರೆಗಾರ ವಕೀಲರನ್ನು ನೇಮಿಸಿಕೊಂಡಿದ್ದರು ಎಂದರೆ ನಿಜ. ನಿಡಿ.188 ನೇದ್ದರಲ್ಲಿಯ ಸಂಗತಿಗಳನ್ನು ಓದಿ ತಿಳಿದುಕೊಂಡು ಹಾಜರುಪಡಿಸಿದ್ದೇನೆಂದರೆ ನಿಜ. ದಾವಾ ಆಸ್ತಿ ಅನುಕ್ರಮ ಸಂಖ್ಯೆ -26 ಅಂದರೆ ಸಿ ಟಿ ಎಸ್ ನಂಬರ 3200/2ಎ/27 ನೇದ್ದರಲ್ಲಿ ಪೌರಾಯುಕ್ತ ನಗರಸಭೆ,

ಗೋಕಾಕರವರು ಮನೆ ಕಟ್ಟಲು ನೀಡಿದ ಪರವಾನಿಗೆ ಆದೇಶವನ್ನು ಪ್ರಶ್ನಿಸಿ, ಜಿಲ್ಲಾಧಿಕಾರಿಗಳು ಬೆಳಗಾವಿಯವರಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನಿಜ. ಆ ಸಮಯದಲ್ಲಿ ಪ್ರಸ್ತುತ ದಾವೆ ಚಾಲ್ತಿಯಲ್ಲಿತ್ತು ಎಂದರೆ ನಿಜ. ನಾನು ಮತ್ತು 4 ನೇ ಪ್ರತಿವಾದಿಯರು ನೀಡಿದ ಹೇಳಿಕೆಯಂತೆ ನಮ್ಮ ವಕೀಲರು ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ನ್ಯಾಯಾಲಯದಲ್ಲಿ ನಮ್ಮ ಪರವಾಗಿ ಲಿಖಿತ ವಾದವನ್ನು ಸಲ್ಲಿಸಿದ್ದರು ಎಂದರೆ ನಿಜ. ಸದರಿ ಪ್ರಕರಣದಲ್ಲಿ ಮೇಲೆ ಹೇಳಿದ ದಾವಾ ಆಸ್ತಿ ಅನುಕ್ರಮ ಸಂಖ್ಯೆ -26 ಅಂದರೆ ಸಿ ಟಿ ಎಸ್ ನಂಬರ 3200/2ಎ/27 ನೇದ್ದು, ಅವಿಭಕ್ತ ಕುಟುಂಬದ ಆಸ್ತಿ ಇರುವುದಾಗಿ ಹಾಗೂ ಸದರಿ ಆಸ್ತಿಯಲ್ಲಿ ಪಾಲು ವಾಟ್ನಿಯಾಗಿರುವುದಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿದ್ದೇವು ಎಂದರೆ ನಿಜ. ಸದರಿ ಪ್ರಕರಣದಲ್ಲಿ ನಾವು ಹಾಗೂ ವಾದಿ ಸಲ್ಲಿಸಿದ ಲಿಖಿತ ಹೇಳಿಕೆಗಳನ್ನು ಪರಿಗಣಿಸಿ ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿಯವರು ಸದರಿ ಆಸ್ತಿಯ ಕುರಿತು ಪ್ರಸ್ತುತ ಪ್ರಕರಣವು ಚಾಲ್ತಿಯಲ್ಲಿದ್ದರಿಂದ ಸದರಿ ಆಸ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಆಗಬಹುದಾದ ಆದೇಶ ಉಭಯ ಪಕ್ಷಗಾರರಿಗೆ ಬಂಧನಕಾರಿಯಾಗಿರುತ್ತದೆಂದು ದಿ.23.07.2015 ರಂದು ಆದೇಶಿಸಿ ಪ್ರಕರಣವನ್ನು ವಿಲೇವಾರಿ ಮಾಡಿರುತ್ತಾರೆಂದರೆ ನಿಜ. ಸದರಿ ಆದೇಶ ಆದಾಗ ಪ್ರಸ್ತುತ ಪ್ರಕರಣ ಚಾಲ್ತಿಯಲ್ಲಿತ್ತು ಎಂದರೆ ನಿಜ. ನಿಡಿ.188 ರಂತೆ ವಾದಿ ಸಲ್ಲಿಸಿದ ಮೇಲ್ಮನವಿಯನ್ನು ಪುರಸ್ಕರಿಸಿ ಮಾನ್ಯ ಜಿಲ್ಲಾಧಿಕಾರಿಗಳು, ಪೌರಾಯುಕ್ತ ನಗರಸಭೆ, ಗೋಕಾಕರವರು ದಾವಾ ಆಸ್ತಿ ಅನುಕ್ರಮ ಸಂಖ್ಯೆ -26 ಅಂದರೆ ಸಿ ಟಿ ಎಸ್ ನಂಬರ 3200/2ಎ/27 ನೀಡಿದ ಕಟ್ಟಡದ ಪರವಾನಿಗೆಯನ್ನು ರದ್ದುಗೊಳಿಸಿರುತ್ತಾರೆಂದರೆ ನಿಜ.

ದಿ. 09.06.2022 ರಂದು ಪ್ರತಿವಾದಿ ನಂಬರ 3(ಎ) ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ಸದರೀಯವರ ಪ್ರತಿವಾದ ಪತ್ರವನ್ನು ಪ್ರತಿವಾದಿ ನಂಬರ 3(ಬಿ) ಮತ್ತು (ಸಿ) ರವರು ಮೆಮೋ ಸಲ್ಲಿಸಿ ಅಳವಡಿಸಿಕೊಂಡಿರುತ್ತಾರೆಂದರೆ ನಿಜ.

ನಾನು ಮತ್ತು 4 ನೇ ಪ್ರತಿವಾದಿಯು ಪ್ರತ್ಯೇಕವಾಗಿ ನಮ್ಮ ಪರವಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ನಮ್ಮ ಪರವಾಗಿ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಹಾಜರಾಗಿದ್ದ ಶ್ರೀ . ಎಲ್. ಎಮ್. ಶೆರೆಗಾರ ವಕೀಲರು ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿ ನಂಬರ 3(ಎ) ದಿಂದ ಪ್ರತಿವಾದಿ ನಂಬರ 3(ಸಿ) ರವರ ಪರವಾಗಿ ವಕಾಲತ್ತು ಹಾಕಿರುತ್ತಾರೆಂದರೆ ನಿಜ. ಸದರಿ ಪ್ರತಿವಾದಿ ನಂಬರ 3(ಎ) ದಿಂನದ 3(ಸಿ) ರವರು ಪ್ರತಿವಾದ ಪತ್ರಸಲಿಲಸುವ ಸಮಯದಲ್ಲಿ ನಿಡಿ.188 ರಂತೆ ಮಾನ್ಯ ಜಿಲ್ಲಾದಿಕಾರಿಗಳು ಮಾಡಿದ ಆದೇಶದ ಬಗ್ಗೆ ಗೊತ್ತಿತ್ತು ಎಂದರೆ ನಿಜ. ಸದರಿ ಮೇಲೆ ಹೇಳಿದ ದಾವಾ ಆಸ್ತಿ ಅನುಕ್ರಮ ಸಂಖ್ಯೆ -26 ಅಂದರೆ ಸಿ ಟಿ ಎಸ್ ನಂಬರ 3200/2ಎ/27 ನೇದ್ದನ್ನು ನಮ್ಮ ತಂದೆ ಖರೀದಿಸಿದ ಬಗ್ಗೆ ಹಾಗೂ ಸದರಿ ಆಸ್ತಿಯನ್ನು ನಮಗೆ ಭಕ್ಷಿಸ ಪತ್ರ ಮಾಡಿಕೊಟ್ಟ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ದಾಖಲೆಗಳನ್ನು ಹಾಜರುಪಡಿಸಿದ್ದೇವು. ಸದರಿ ದಾಖಲೆಗಳನ್ನು ಹಾಜರುಪಡಿಸಿದ್ದಾಗ್ಯೂ ಸಹ ಮಾನ್ಯ ಜಿಲ್ಲಾಧಿಕಾರಿಗಳು ಸದರಿ ಆಸ್ತಿಯು ಅವಿಭಕ್ತ ಕುಟುಂಬದ ಆಸ್ತಿ ಇರುತ್ತದೆಂದು ಆದೇಶ ಮಾಡಿರುತ್ತಾರೆಂದರೆ ನಿಜ. ನಿಡಿ.188 ರಂತೆ ಆದ ಆದೇಶವನ್ನು ನಮ್ಮ ವಕೀಲರಾದ ಶ್ರೀ. ಎಲ್. ಎಮ್. ಶೆರೆಗಾರ ವಕೀಲರಿಗೆ ತೋರಿಸಿರುತ್ತೇವೆ. ಸದರಿ ಆದೇಶವನ್ನು ನಾವು ನಮ್ಮ ವಕೀಲರಿಗೆ ತೋರಿಸಿದ್ದಾಗ್ಯೂ ಸಹ ಸದರಿ ಆಸ್ತಿಯು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಇರುತ್ತದೆಂದು ಪ್ರತಿವಾದಿ ನಂಬರ 3(ಎ) ರವರ ಪ್ರತಿವಾದ ಪತ್ರದಲ್ಲಿ ಹೇಳಿರುತ್ತಾರೆಂದರೆ ನಿಜ. ಸದರಿ ಸಂಗತಿಯು ನನಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯುವ ಪೂರ್ವದಲ್ಲಿ ಗೊತ್ತಿತ್ತು ಎಂದರೆ ನಿಜ. ನಿಡಿ.188 ನೇದ್ದರಂತೆ ಆದ ಆದೇಶದ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿರುವುದಿಲ್ಲ, ಆದ್ದರಿಂದ ಜಿಲ್ಲಾಧಿಕಾರಿಗಳ ಆದೇಶ ಅಂತಿಮವಾಗಿರುತ್ತದೆಂದರೆ ನಿಜ.

ದಾವಾ ಆಸ್ತಿ ಅನುಕ್ರಮ ಸಂಖ್ಯೆ-26 ಅಂದರೆ ಸಿ ಟಿ ಎಸ್ ನಂಬರ 3200/2ಎ/27 ನಮ್ಮ ತಂದೆ ಖರೀದಿಸುವ ಕಾಲಕ್ಕೆ ಆತ ಮತ್ತು ಆತನ ಅಣ್ಣ ತಮ್ಮಂದಿರರ ಮದ್ಯೆ ಪಾಲು ವಾಟ್ನಿಯಾದ ಬಗ್ಗೆ ನನ್ನ ಬಾಯಿ ಹೇಳಿಕೆಯನ್ನು ಹೊರತುಪಡಿಸಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ನಿಜ. ಅದೇ ರೀತಿ ಸದರಿ ಆಸ್ತಿಯನ್ನು ನಮ್ಮ ತಂದೆ ನನ್ನ ಹಾಗೂ 4 ನೇ ಪ್ರತಿವಾದಿಯ ಹೆಸರಿಗೆ ಭಕ್ಷಿಸ ಪತ್ರ ಮಾಡಿಕೊಡುವ ಕಾಲಕ್ಕೆ ನಮ್ಮ ತಂದೆ ಹಾಗೂ ಆತನ ಸಹೋದರರ ಮದ್ಯೆ ಪಾಲು ವಾಟ್ನಿಯಾದ ಬಗ್ಗೆ ಯಾವುದೇ ದಾಖಲೆಗಳು ಇರಲಿಲ್ಲ ಎಂದರೆ ನಿಜ.

ನನ್ನ ತಂದೆ ಮತ್ತು ಆತನ ಸಹೋದರರು ಸುಮಾರು 70 ವರ್ಷಗಳಿಂದ ಒಕ್ಕಲುತನ ಹಾಗೂ ಜವಳಿ ವ್ಯಾಪಾರವನ್ನು ನಮ್ಮ ಅಜ್ಜನ ಕಾಲದಿಂದಲೂ ಮಾಡುತ್ತಾ ಬಂದಿರುತ್ತಾರೆಂದರೆ ನಿಜ.

ದಾವಾ ಆಸ್ತಿ ಅನುಕ್ರಮ ಸಂಖ್ಯೆ -2 ಸರ್ವೆ ನಂಬರ 182/6 ನೇದ್ದನ್ನು ನಮ್ಮ ಅಜ್ಜ ಈರಪ್ಪನು ಚಹಾ ವ್ಯಾಪಾರದಿಂದ ಬಂದ ಆದಾಯದಿಂದ ಖರೀದಿಸಿರುತ್ತಾನೆ. ನಿಡಿ.184 ರಂತೆ ಹಾಜರುಪಡಿಸಿದ ಖರೀದಿ ಪತ್ರದಲ್ಲಿ ನಮ್ಮ ಅಜ್ಜ ಈರಪ್ಪ ಶೇತ್ಕಿ ಮತ್ತು ವ್ಯಾಪಾರ ಮಾಡುತ್ತಿರುವ ಬಗ್ಗೆ ಒಕ್ಕಣಿ ಇರುತ್ತದೆಂದರೆ ನಿಜ. ಸದರಿ ಆಸ್ತಿಗೆ ಸರ್ವೆ ನಂಬರ -182/6 ಇರುತ್ತದೆಯೋ ಅಥವಾ ಸರ್ವೆ ನಂಬರ 182/7 ಇರುತ್ತದೆಯೋ ಎಂದು ನನಗೆ ಗೊತ್ತಿಲ್ಲ. ಸದರಿ ನಿಡಿ.184 ರಂತೆ ಖರೀದಿಸಿದ ಜಮೀನು ಕೆನಾಲ್ ಬಾಗಾಯತ್ ಇರುವ ಬಗ್ಗೆ ಒಕ್ಕಣೆ ಇರುತ್ತದೆಂದರೆ ನಿಜ. ಸದರಿ ಜಮೀನು ಬಸಳಿಗುಂದಿ ಗ್ರಾಮದಲ್ಲಿ ಇದ್ದು, ಸದರೀ ಗ್ರಾಮವು ಘಟಪ್ರಭಾ ನದಿ ದಂಡೆಯಲ್ಲಿ ಬರುತ್ತದೆಂದರೆ ನಿಜ. ಆದ್ದರಿಂದ ಸದರಿ ಜಮೀನಿನಲ್ಲಿ ನೀರಾವರಿ ಬೆಳೆಗಳನ್ನು ಬೆಳೆಯುತ್ತಿದ್ದು, ಒಳ್ಳೆಯ ಆದಾಯ ಬರುತ್ತಿತ್ತು ಎಂದರೆ ನಿಜ. ನಿಡಿ.185 ರಂತೆ ಹಾಜರುಪಡಿಸಿದ ಖರೀದಿ ಪತ್ರದಲ್ಲಿ ಮೃತ 2 ನೇ ಪ್ರತಿವಾದಿ

ರಾಮಚಂದ್ರ ಇವರ ಉದ್ಯೋಗ ಶೇತ್ಕಿ ಇರುತ್ತದೆಂದು ತೋರಿಸಲಾಗಿರುತ್ತದೆಂದರೆ ನಿಜ. ನಿಡಿ.184 ಹಾಗೂ ನಿಡಿ.185 ಎರಡೂ ಖರೀದಿ ಪತ್ರಗಳು ಒಂದೇ ದಿನ ಆಗಿರುತ್ತವೆ ಎಂದರೆ ನಿಜ. ನಿಡಿ.185 ರಂತೆ ಖರೀಸಿದ ಜಮೀನು ಸಹ ನೀರಾವರಿ ಜಮೀನು ಇರುತ್ತದೆಂದರೆ ನಿಜ. ಸದರಿ ಜಮೀನಿನಿಂದ ಸಹ ಒಳ್ಳೆಯ ಆದಾಯ ಇತ್ತು ಎಂದರೆ ನಿಜ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

<u>**ಸಾಕ್ಷಿಯ ಸಹಿ**</u>